ಶ್ರೀ ಕೆ. ಎಸ್. ಬೀಳಗಿ :- ಮಾನ್ಯ ಉಪಾಧ್ಯಕ್ಷರೆ, ಈ ಒಂದು ಕಟ್ಟಡ ತಡ ವಾಗುವುದಕ್ಕೆ ಮೂಲ ಕಾರಣ ಹಣಕಾಸಿನ ತೊಂದರೆ, ಹೀಗಾಗಿ ಆ ಕಾರ್ಯ ಕೈಗೆತ್ತಿ ಕೊಳ್ಳುವುದಕ್ಕಾಗಲಿಲ್ಲ. ಈಗ ಮಾನ್ಯ ಸದಸ್ಯರಿಗೆ ಗೊತ್ತಿದ್ದಂತೆ ಈ ಕಟ್ಟಡದ ಕೆಲಸವನ್ನು ಈ ವರ್ಷದಲ್ಲಿ ಪ್ರಾರಂಭ ಮಾಡುತ್ತೇವೆ.

ಶ್ರೀ ಎಸ್. ಎಂ. ದೇಸಾಯಿ :- ಪ್ರಸಕ್ತ ಸಾಲಿನಲ್ಲಿ ಪ್ರಾರಂಭ ಮಾಡುತ್ತೇವೆ ಎಂದು ಸಚಿವರು ಹೇಳಿದ್ದಾರೆ. ಆ ಕಟ್ಟಡದ ಅಂದಾಜು ಬೆಲೆ ಎಷ್ಟು ಆಗುತ್ತದೆ ಎನ್ನು ವುದನ್ನು ಮಾನ್ಯ ಸಚಿವರು ಹೇಳಬೇಕೆಂದು ತಮ್ಮ ಮೂಲಕ ಕೇಳುವುದಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಕೆ. ಎಸ್. ಬೀಳಗಿ :- ಮಾನ್ಯ ಉಪಸಭಾಧ್ಯಕ್ಷರೆ, ಆ ಕಟ್ಟಡದ ಕಾರ್ಯದ ಪ್ಲಾನ್ ತಯಾರಾಗಿದೆ. ಈ ಕಟ್ಟಡದ ಡೀಟೈಲ್ಡ್ ಅಂದಾಜನ್ನು ಮಾಡಲಿಕ್ಕೆ ಶುರುಮಾಡಿದ್ದೇವೆ. ಅದಾದಕೂಡಲೇ ಟೆಂಡರ್ ಕರೆದು ಡಿಸೆಂಬರ್ ತಿಂಗಳ ಒಳಗೆ ಕೆಲಸ ಮಾಡಲಿಕ್ಕೆ ಪ್ರಾರಂಭ ಮಾಡುತ್ತೇವೆ.

ಶ್ರೀ ಎಸ್.ಎಂ. ದೇಸಾಯಿ :- ನನಗೆ ಗೊತ್ತಿರುವ ಹಾಗೆ 1986 ರ ಅಂದಾಜಿನಲ್ಲಿ ಆ ಕಟ್ಟಡಕ್ಕೆ 6 ಲಕ್ಷ ರೂಪಾಯಿಗಳ ಅಂದಾಜು ಆಗಿತ್ತು. ಆದರೆ ಈಗ ಈ ಕಟ್ಟಡವನ್ನು ಅಷ್ಟೇ ಹಣದಲ್ಲಿ ಕಟ್ಟಿದರೆ ಈಗಿನ ಬೆಲೆಗಳು ಹೆಚ್ಚು ಆಗಿರುವುದರಿಂದ ತೊಂದರೆ ಯಾಗುತ್ತದೆ. ಆದ್ದರಿಂದ ಹೆಚ್ಚಿನ ಹಣವನ್ನು ಬಿಡುಗಡೆ ಮಾಡಿ ಈ ಬಸ್ ಸ್ಟ್ಯಾಂಡ್ ಕಟ್ಟಡ ವನ್ನು ಕಟ್ಟಿಸಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಕೆ.ಎಸ್. ಬೀಳಗಿ :- ಅವಶ್ಯ ಎಷ್ಟು ಇದೆ ಅಷ್ಟು ಖರ್ಚು ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೇವೆ.

ವಿಷಯ:- ಉತ್ತರ ಕನ್ನಡ ಜಿಲ್ಲೆಯ ಸಬ್-ರಿಜಿಸ್ಟ್ರಾರ್ ಕಛೇರಿಯ ಬಗ್ಗೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ. 398 (2932)

ಶ್ರೀ ಪಿ. ಎಸ್. ಜಯವಂತ (ಸಿರ್ಸಿ) :- ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಉತ್ತರ ಕನ್ನಡ ಜಿಲ್ಲೆಯಲ್ಲಿರುವ ಸಬ್-ರಿಜಿಸ್ಟ್ರಾರ್ ಕಛೇರಿಗಳ ಸಂಖ್ಯೆ ಎಷ್ಟು;

(ಆ) 1994-95 ರಲ್ಲಿ ಉತ್ತರ ಕನ್ನಡ ಜಿಲ್ಲೆಯಿಂದ ಸಂದಾಯವಾದ ಆದಾಯವೆಷ್ಟು;

(ಇ) ಸದರಿ ಕಛೇರಿಗಳಲ್ಲಿ ಸಿಬ್ಬಂದಿಗಳ ಕೊರತೆ ಇದೆಯೇ; ಪ್ರತಿ ಕಛೇರಿಯಲ್ಲಿ ಎಷ್ಟು;

(ಈ) ಇದರಿಂದ ಸಾರ್ವಜನಿಕರಿಗೆ ಆಗುವ ತೊಂದರೆ ಸರ್ಕಾರದ ಗಮನಕ್ಕೆ ಬಂದಿದೆಯೇ;

(ಉ) ಸದರಿ ಕೊರತೆಯನ್ನು ನಿವಾರಿಸಲು ಸರ್ಕಾರ ಕೂಡಲೇ ಕ್ರಮ ಕೈಗೊಳ್ಳುವುದೇ?

ಶ್ರೀ ಆರ್. ಎಲ್. ಜಾಲಪ್ಪ (ಕಂದಾಯ ಸಚಿವರು) :-

(ಅ) 5.

(ಆ) ರೂ. 1,92,56,513-00.

(ಇ) ವಿವರದ ಪಟ್ಟಿ ಲಗತ್ತಿಸಿದೆ.

(ಈ) ಹೌದು

(ಉ) ಹುದ್ದೆಗಳನ್ನು ತುಂಬಲು ಕ್ರಮ ಕೈಗೊಳ್ಳಲಾಗುತ್ತಿದೆ.

ಖಾಲಿ ಹುದ್ದೆಗಳ ವಿವರದ ಪಟ್ಟಿ

ಉತ್ತರ ಕನ್ನಡ ಜಿಲ್ಲೆಯ ಜಿಲ್ಲಾ-ನೋಂದಣಿ ಕಛೇರಿ ಮತ್ತು ಉಪ-ನೋಂದಣಿ ಕಛೇರಿಗಳಲ್ಲಿ ಖಾಲಿ ಇರುವ ಸಿಬ್ಬಂದಿ ವಿವರ :

ಕ್ರಮ ಸಂಖ್ಯೆ	ಜಿಲ್ಲಾ-ನೋಂದಣಿ: ಉಪ-ನೋಂದಣಿ ಕಛೇರಿ ಹೆಸರು	ಶಾಶ್ವತ ದ್ವಿತೀಯ ದರ್ಜೆ ಸಹಾಯಕರ ಖಾಲಿ ಹುದ್ದೆಗಳ ಸಂಖ್ಯೆ.	ಕರ್ನಾಟಕ ಮುದ್ರಾಂಕ ಕಾಯ್ದೆ ಕಲಂ-45 ಎ ಗೆ ಸಂಬಂಧಿಸಿದಂತೆ ಖಾಲಿ ಇರುವ ತಾತ್ಕಾಲಿಕ ಹುದ್ದೆಗಳು	'ಡಿ' ಗ್ರೂಪ್ ಹುದ್ದೆಗಳು	ಒಟ್ಟು
1.	ಜಿಲ್ಲಾ-ನೋಂದಣಿ ಕಛೇರಿ, ಕಾರವಾರ,	-	1 ದ್ವಿ.ದ. ಸಹಾಯಕ, 1 ಬೆರಳಚ್ಚುಗಾರರು	-	2
2.	ಉಪ-ನೋಂದಣಿ ಕಛೇರಿ, ಕಾರವಾರ,	-	-	1 ಅಟೆಂಡರ್	1
3.	ಉಪ-ನೋಂದಣಿ ಕಛೇರಿ, ಸಿರ್ಸಿ	-	-	1 ಅಟೆಂಡರ್	1
4.	ಉಪ-ನೋಂದಣಿ ಕಛೇರಿ, ಹೊನ್ನಾವರ,	1	-	-	1
5.	ಉಪ-ನೋಂದಣಿ ಕಛೇರಿ, ಹಳಿಯಾಳ,	-	-	1 ಜವಾನ	1
6.	ಉಪ-ನೋಂದಣಿ ಕಛೇರಿ, ಕುಮಟ,	1	-	1 ಜವಾನ	2
	ಒಟ್ಟು	2	2	4	8

ಶ್ರೀ ಪಿ. ಎಸ್. ಜಯವಂತ (ಸಿರ್ಸಿ) :- ಮಾನ್ಯ ಉಪಾಧ್ಯಕ್ಷರೆ, ಸಚಿವರು ಕೊಟ್ಟಿರುವ ಉತ್ತರ ಸತ್ಯಕ್ಕೆ ದೂರವಾದುದು. ಸಿರ್ಸಿಯ ಉಪ-ನೊಂದಾವಣೆ ಕಚೇರಿಯಲ್ಲಿ ದ್ವಿತೀಯ ದರ್ಜೆ ಸಹಾಯಕರಾಗಲಿ, ತಾತ್ಕಾಲಿಕವಾದ ಸಹಾಯಕರು ಆಗಲಿ ಅಲ್ಲಿ ಇರುವುದಿಲ್ಲ. ಸಿರ್ಸಿ ಉಪ-ನೊಂದಾವಣೆ ಕಚೇರಿಗೆ ಮೂರು ತಾಲ್ಲೂಕುಗಳ ವ್ಯವಹಾರ ಅಲ್ಲಿ ಇರುವುದರಿಂದ ಅಲ್ಲಿ ಕೆಲಸದ ಒತ್ತಡವು ಬಹಳ ಇರುವುದರಿಂದ ಅಲ್ಲಿನ ಜನರಿಗೆ ಬಹಳ ತೊಂದರೆ ಯಾಗಿದೆ. ಇದರ ಬಗ್ಗೆ ಹೆಚ್ಚಿನ ಗಮನಹರಿಸಬೇಕು ಎಂದು ತಮ್ಮ ಮೂಲಕ ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ :- ಮಾನ್ಯ ಉಪಾಧ್ಯಕ್ಷರೆ, ಸತ್ಯಕ್ಕೆ ದೂರವಾದುದು ಏನೂ ಇಲ್ಲ. ಸತ್ಯಕ್ಕೆ ಹತ್ತಿರವಾಗಿಯೇ ಇದೆ. ಉಪ-ನೊಂದಾವಣೆ ಕಚೇರಿ ಕಾರವಾರ; ಇದರಲ್ಲಿ ಸರಾಸರಿ ರಿಜಿಸ್ಟರ್ ಆಗಿರುವುದು ಮೂರು. ಉಪ ನೊಂದಾವಣೆ ಕಚೇರಿ, ಸಿರ್ಸಿ ಇಲ್ಲಿ ಸರಾಸರಿ ನೊಂದಣಿ ಆಗಿರತಕ್ಕಂಥದ್ದು ದಿವಸಕ್ಕೆ 4. ಉಪ-ನೊಂದಾವಣೆ ಕಚೇರಿ ಹಳಿಯಾಳ, ಸರಾಸರಿ ನೊಂದಣಿ ಆಗಿರುವುದು ಇಲ್ಲಿ 3. ಹೊನ್ನಾವರ ಉಪನೊಂದಾವಣೆ ಕಚೇರಿಯಲ್ಲಿ 3. ಕುಮುಟಾದಲ್ಲಿ 2 ಸರಾಸರಿ ಆಗಿರುವುದು. ಅಕಸ್ಮಾತ್ ದ್ವಿತೀಯ ದರ್ಜೆ ಗುಮಾಸ್ತನ ಹುದ್ದೆ ಅಲ್ಲಿ ಇಲ್ಲಿ ಸ್ವಲ್ಪ ವ್ಯತ್ಯಾಸಗಳು ಇದ್ದರೆ ಈಗಾಗಲೇ ಅಪಾಯಿಂಟ್ ಮೆಂಟ್ ಮಾಡುತ್ತಾ ಇದ್ದೇವೆ. ಇದರಲ್ಲಿ ಸತ್ಯಕ್ಕೆ ದೂರವಾದುದು ಏನೂ ಅಲ್ಲ. ಎಲ್ಲೆಲ್ಲಿ ಅವರು ಹೇಳಿದ ಹಾಗೆ ದ್ವಿತೀಯ ದರ್ಜೆ ಗುಮಾಸ್ತರು ಇಲ್ಲ ಅಲ್ಲಿ ನಾವು ವಿಚಾರ ಮಾಡಿ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ವಿಷಯ :- ಲಾಲಾಬಾಗ್ ಸಸ್ಯ ಕ್ಷೇತ್ರದ ಅಭಿವೃದ್ಧಿ :

1) ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 399 (2643)

ಶ್ರೀ ರಾಮಲಿಂಗಾರೆಡ್ಡಿ (ಜಯನಗರ) :- ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸರ್ಕಾರವು ಲಾಲ್‌ಬಾಗ್ ಸಸ್ಯ ತೋಟವನ್ನು ಅಭಿವೃದ್ಧಿಪಡಿಸಲು 1995-96 ನೇ ಸಾಲಿನಲ್ಲಿ ಯೋಜನೆಗಳನ್ನು ಹಾಕಿಕೊಂಡಿದೆಯೇ?

ಆ) ಹಾಗಿದ್ದಲ್ಲಿ 1995-96 ನೇ ಸಾಲಿನಲ್ಲಿ ಲಾಲ್‌ಬಾಗ್ ಸಸ್ಯತೋಟ ನಿರ್ವಹಣೆ ಗಾಗಿ ಮತ್ತು ಇತರೆ ವಿವಿಧ ಕಾರ್ಯಕ್ಕಾಗಿ ಎಷ್ಟು ಹಣವನ್ನು ವೆಚ್ಚ ಮಾಡಲು ಯೋಜಿಸ ಲಾಗಿದೆ.?

ಇ) ಕೈಗೊಂಡಿರುವ ವಿವಿಧ ಅಭಿವೃದ್ಧಿ ಯೋಜನೆಗಳ ವಿವರಗಳೇನು?

ಈ) ಇದುವರೆಗೆ ಎಷ್ಟು ಹಣ ವಿರ್ಚು ಮಾಡಲಾಗಿದೆ?